9

# “ಇದು ಅದಾಗಿರುತ್ತದೆ!”

*“ಆಗ ಪೇತ್ರನು, ... ಅವರಿಗೆ, ... ಆದರೆ ಇದು ಪ್ರವಾದಿಯಾದ ಯೋವೇಲನ ಮೂಲಕವಾಗಿ ಹೇಳಿಸಿದ ಸಂಗತಿ ...” (ಅಪೊಸ್ತಲರ ಕೃತ್ಯಗಳು 2:14-16; KJV).*

ನೀವು ಮತ್ತು ನಾನು ಒಂದು ಅಸಾಮಾನ್ಯವಾದ ಪ್ರಯೋಗಕ್ಕಾಗಿ ಹತ್ತು ಜನರನ್ನು ಕೂಡಿಸಿದ್ದೇವೆಂದು ಕಲ್ಪನೆ ಮಾಡಿಕೊಳ್ಳಿರಿ. ಈ ಜನರು ಮಧ್ಯರಾತ್ರಿಯಲ್ಲಿ ಒಂದು ದೊಡ್ಡ ಹೊಲದಲ್ಲಿ ನಮ್ಮೊಂದಿಗೆ ನಿಂತುಕೊಂಡಿರುವರು. ಅವರಿಗೆ ಹೀಗೆ ಹೇಳಲ್ಪಟ್ಟಿತು: “ಅಡ್ಡಗಲದಲ್ಲಿ ಎರಡು ಇಂಚುಳ್ಳ ಒಂದು ಗಟ್ಟಿಯಾದ ಕಪ್ಪು ವೃತ್ತವು ಕೇಂದ್ರವಾಗಿರುವ ಒಂದು ಗುರಿಯು, ನೀವು ನಿಂತಿರುವಲ್ಲಿಂದ ಒಂದು ನೂರು ಯಾರ್ಡಿನ ದೂರದಲ್ಲಿ ಇಡಲ್ಪಟ್ಟಿದೆ. ಗುರಿಯು ನಿಮ್ಮ ಎಡಕ್ಕಾಗಲಿ ಇಲ್ಲವೇ ಬಲಕ್ಕಾಗಲಿ ಇರಬಹುದು; ಅದು ನಿಮ್ಮ ಮುಂದೆಯಾಗಲಿ ಇಲ್ಲವೇ ಹಿಂದೆಯಾಗಲೀ ಇರಬಹುದು. ನಿಮ್ಮಲ್ಲಿ ಪ್ರತಿಯೊಬ್ಬರಿಗೂ ಒಂದು ಬಿಲ್ಲು ಮತ್ತು ಹತ್ತು ಬಾಣಗಳು ಕೊಡಲ್ಪಡುವವು. ನೀವು ಗುರಿಯ ಸ್ಥಳವನ್ನು ತಿಳಿಯದಿದ್ದರೂ ಮತ್ತು ಕತ್ತಲೆಯ ಕಾರಣದಿಂದ ನೀವು ಅದನ್ನು ನೋಡಲಾಗದಿದ್ದರೂ ನಿಮ್ಮಲ್ಲಿ ಯಾರಾದರೂ ಆ ಗುರಿಯ ಕೇಂದ್ರಬಿಂದುವಿನಲ್ಲಿ ಆಕಸ್ಮಿಕವಾಗಿ ಒಂದು ಬಿಲ್ಲನ್ನು ಎಸೆದು ಸಿಕ್ಕಿಸುವಿರೋ ಎಂಬುದನ್ನು ನೋಡಲು ನಾವು ಬಯಸುತ್ತೇವೆ.”

ಒಂದು ಸಮಯಕ್ಕೆ ಒಬ್ಬರು, ಎಲ್ಲಾ ಹತ್ತು ಜನರು ಮುಂದೆ ಹೆಜ್ಜೆ ಇಟ್ಟು ತಮ್ಮ ಬಾಣಗಳನ್ನು, ಅಕ್ಷರಶಃವಾಗಿ ಕತ್ತಲೆಯನ್ನು ಭೇಧಿಸಿ ಕಪ್ಪಾದ ಎರಡು ಇಂಚು ವೃತ್ತದ ಕಡೆಗೆ ಎಸೆದರು, ಕೆಲವರು ಬಲಗಡಗೆ, ಕೆಲವರು ಎಡಗಡೆಗೆ ಎಸೆದರು; ಕೆಲವರು ತಮ್ಮ ಎದುರಿಗೆ ಎಸೆದರು; ಕೆಲವರು ಸುತ್ತ ತಿರುಗಿ ತಮ್ಮ ಹಿಂದೆ ಎಸೆದರು. ಅಂತಿಮವಾಗಿ, ಒಂದು ನೂರು ಬಾಣಗಳು ರಾತ್ರಿಯ ಅಂಧಕಾರದೊಳಗೆ ಕಾಣದ ಮಿಂಚಿನ ಹಾಗೆ ಕಳುಹಿಸಲ್ಪಟ್ಟವು. ಆಗ ನಮ್ಮ ಫ್ಲ್ಯಾಶಲೈಟುಗಳೊಂದಿಗೆ ನಾವು ನಡೆದು, ಗುರಿಯನ್ನು ಕಂಡುಹಿಡಿದೆವು.

ಗುರಿಯ ಕಣ್ಣಿನ ಮಧ್ಯದಲ್ಲಿ ಎಷ್ಟು ಬಾಣಗಳನ್ನು ನಾವು ಕಂಡುಕೊಂಡೆವೆಂದು ನೀವು ತಿಳಿಯುತ್ತೀರಿ? “ಯಾವುದೂ ಇಲ್ಲ. ಒಂದೇ ಒಂದಾದರೂ ಬಾಣವಿಲ್ಲ,” ನೀವು ಸುಲಭವಾಗಿ ಹೇಳಬಹುದು. “ಸಹಾಯವಿಲ್ಲದ ಜನರು ಅವರು ನೋಡ ಲಾರದ ಗುರಿಗೆ ಎಸೆಯಲಾರರು” ಎಂದೂ ನೀವು ಹೇಳಬಹುದು. ನೀವು ಸ್ಪಷ್ಟವಾಗಿ ಸರಿಯಾಗಿದ್ದೀರಿ. ಹೀಗಿದ್ದರೂ ಈ ಸಂಗತಿಯನ್ನು ಕುರಿತು ಯೋಚಿಸಿರಿ: ಮನುಷ್ಯರು ಮಾಡಲಾರದಂಥದ್ದನ್ನು, ದೇವರು ಪ್ರೇರೇಪಿತ ಮನುಷ್ಯರಿಗೆ ಮಾಡಲು ಶಕ್ತರನ್ನಾಗಿ ಮಾಡಿದನು.

ಹಳೇ ಒಡಂಬಡಿಕೆಯ ಸಮಯಗಳಲ್ಲಿ ಮತ್ತು ಯೇಸುವಿನ ಸೇವೆಯ ಸಮಯದಲ್ಲಿ, ಪ್ರವಾದಿಕ ಬಾಣಗಳು ಪರಿಶುದ್ಧಾತ್ಮನ ದೈವಿಕ ಬಿಲ್ಲಿನಿಂದ ಭವಿಷ್ಯದ

ಕಡೆಗೆ ವೇಗವಾಗಿ ಕಳುಹಿಸಲ್ಪಟ್ಟವು. ಅನಂತರದಲ್ಲಿ, ಭವಿಷ್ಯದ ತೆರೆಯು ಸಮಯದ ಕೈಯಿಂದ ಪಕ್ಕಕ್ಕೆ ತಳ್ಳಲ್ಪಟ್ಟಾಗ ಪ್ರತಿಯೊಂದು ಬಾಣವು ತನ್ನ ಗುರಿಯನ್ನು ಸರಿಯಾಗಿ, ಪರಿಪೂರ್ಣತೆಯಿಂದ ಅಪ್ಪಳಿಸಿತು.

ಕೆಲವು ಹೆಸರಿನ ಪ್ರವಾದನೆಗಳಾಗಿದ್ದು, ಭವಿಷ್ಯದ ಘಟನೆಗಳಲ್ಲಿ ಜನರನ್ನೂ ಸ್ಥಳಗಳನ್ನೂ ಗುರುತಿಸಿದವು; ಇತರವುಗಳು ದ್ವಂದ್ವವಾದವುಗಳಾಗಿದ್ದವು, *ಪ್ರವಾದಿಯ ದಿನ* ಮತ್ತು *ಮೆಸ್ಸೀಯನ ದಿನ* ಎರಡನ್ನೂ ಕುರಿತು ಸಂದೇಶಗಳೊಂದಿಗಿದ್ದವು. ಇನ್ನೂ ಇತರವುಗಳು ಸಂಬಂಧಿಸಿದ ಪ್ರತಿ ಗುರುತುಗಳ ಮುಖಾಂತರ ನೆರವೇರಬೇಕಾಗಿದ್ದ ವಿಧಗಳನ್ನು ಪ್ರಕಟಿಸಿದ ಸಾಂಕೇತಿಕ ಪ್ರವಾದನೆಗಳು ಇದ್ದವು. ಪ್ರವಾದನೆಯ ವಿಧದ ಭಿನ್ನತೆಯಿಲ್ಲದೆ, ಪ್ರತಿಯೊಂದು ಪ್ರವಾದಿಕ ಬಾಣವು ಕೇಂದ್ರದಲ್ಲಿದ್ದ ಅದರ ಗುರಿಯನ್ನು ಹೊಡೆಯಿತು.

ಹಳೇ ಒಡಂಬಡಿಕೆಯ ಪ್ರವಾದನೆಯಲ್ಲಿ ಸಭೆಯು "ಸಭೆ," ಎಂಬ ಮಾತಿನಿಂದ ಎಂದೂ ಉಲ್ಲೇಖಿಸಲ್ಪಡದಿದ್ದರೂ. ಅದು ಆಗಾಗ ಅನ್ವಯದಿಂದ ಗುರುತಿಸಲ್ಪಟ್ಟಿತು (ಆಮೋಸ 9:11) ಮತ್ತು ಕೆಲವು ಸಲ "ನಿತ್ಯ ರಾಜ್ಯ" ಎಂಬ ನಿರ್ದಿಷ್ಟ ಮಾತಿನಿಂದ (ದಾನಿಯೇಲ 2:44) ಇಲ್ಲವೇ "ನೂತನ ಒಡಂಬಡಿಕೆ" (ಯೆರೆಮೀಯ 31:31), ಅಥವಾ "ಯೆಹೋವನ ಮಂದಿರದ ಬೆಟ್ಟ" (ಯೆಶಾಯ 2:2) ಎಂಬಂಥ ಮಾತುಗಳಿಂದ ಗುರುತಿಸಲ್ಪಟ್ಟಿತು. ಬರಲಿಕ್ಕಿದ್ದ ರಾಜ್ಯವು ಹಳೇ ಒಡಂಬಡಿಕೆಯ ಪ್ರವಾದನೆಯ ಅಡಕದಲ್ಲಿ ಪ್ರಮುಖಸ್ಥಾನ ಹೊಂದಿಕೊಂಡಿತ್ತು.

ಬರಲಿಕ್ಕಿದ್ದ "ರಾಜ್ಯದ," ಸಂಕೇತದೊಂದಿಗೆ ಸಭೆಯ ಆಗಮನವನ್ನು ಮುಂತಿಳಿಸಲು ಪರಿಶುದ್ಧಾತ್ಮನಿಂದ ಪ್ರವಾದನೆಗಳ ಎಲ್ಲಾ ಮೂರು ವಿಧಗಳು ಉಪಯೋಗಿಸಲ್ಪಟ್ಟವು. ಸಭೆಯನ್ನು ಕುರಿತ ಒಂದು ಪರಿಚಿತವಾದ ದ್ವಂದ್ವ ಪ್ರವಾದನೆಯನ್ನು ತಗೆದುಕೊಂಡು, ಅದು ಹೇಗೆ ಸಭೆಯ ಅದ್ಭುತಕರವಾದ ಪ್ರಾರಂಭವನ್ನು ಮೀಸಲಾಗಿಡುತ್ತದೆ ಎಂಬುದನ್ನು ಗಮನಿಸೋಣ.

## ವ್ಯಾಖ್ಯಾನ:
## ಪತ್ಯವು ಏನು ಹೇಳುತ್ತದೆ?

ಪೇತ್ರನು, ಪಂಚಾಶತ್ತಮ ದಿನದಂದು ತನ್ನ ಪ್ರಸಂಗದಲ್ಲಿ, ಯೋವೇಲನ ಪ್ರಸಿದ್ಧವಾದ ಪ್ರವಾದನೆಯನ್ನು ಉಲ್ಲೇಖಿಸಿದನು (ಅಪೊಸ್ತಲರ ಕೃತ್ಯಗಳು 2:16-21; ಯೋವೇಲ 2:28-32), ಅದು, "ಅಂತಿಮ ದಿನಗಳ" ಯುಗವು ಪರಿಶುದ್ಧಾತ್ಮನ ಅದ್ಭುತಕರವಾದ ಇಳಿದುಬರುವಿಕೆಯೊಂದಿಗೆ ಪ್ರಾರಂಭವಾಗುವುದನ್ನು ಸೂಚಿಸಿದ ಮುಂತಿಳಿಸುವಿಕೆಯಾಗಿತ್ತು.

*ನೆರವೇರುವಿಕೆಯ ಸ್ವರೂಪ*

ಯೋವೇಲನ ಪ್ರಕಟನೆಯು ಇಬ್ಬಗೆಯ ಇಲ್ಲವೇ ಜೋಡಿಯಾದ ಪ್ರವಾದನೆ ಆಗಿತ್ತು. ಯೋವೇಲನ ದಿನಕ್ಕಾಗಿ, ಅದು ದೇವರ ಜನರು ತಮ್ಮ ಪಾಪಗಳಿಗಾಗಿ ಮಾನಸಾಂತರ ಪಟ್ಟು ದೇವರ ಕಡೆಗೆ ತಿರುಗಿಕೊಂಡರೆ ಆತ್ಮಿಕ ಆಶೀರ್ವಾದಗಳನ್ನು ಹೊಂದಿಕೊಳ್ಳುವರು ಎಂಬ ವಾಗ್ದಾನವನ್ನು ಒಳಗೊಂಡಿತ್ತು. ಭವಿಷ್ಯದ ಅನ್ವಯದಲ್ಲಿ, ಅದು ಪರಿಶುದ್ಧಾತ್ಮನ ವಿಶೇಷ ಸುರಿಸುವಿಕೆಯ ದಿನದಂದು ನೂತನ ಯುಗವು ಇಲ್ಲವೇ ಕಾಲವು ಪ್ರಾರಂಭವಾಗುವುದು ಎಂಬುದನ್ನು ಸೂಚಿಸಿತು.

ಅಪೊಸ್ತಲರ ಪರಿಶುದ್ಧಾತ್ಮನ ಈ ಬಾಪ್ತಿಸ್ಮದ ಬಗ್ಗೆ ಸ್ನಾನಿಕನಾದ ಯೋಹಾನನಿಂದಲೂ ಯೇಸುವಿನಿಂದಲೂ ಇಬ್ಬರಿಂದಲೂ ಎಚ್ಚರಿಸಲ್ಪಟ್ಟಿದ್ದರು. ಯೋಹಾನನು ತನ್ನ ಅಲ್ಪ ಪ್ರಸಂಗಿಸುವಿಕೆಯ ಸೇವೆಯಲ್ಲಿ, "... ನಾನಂತೂ ನಿಮ್ಮ ಮನಸ್ಸು ತಿರುಗಿಕೊಳ್ಳಬೇಕೆಂಬುದಕ್ಕೆ ನಿಮಗೆ ನೀರಿನಲ್ಲಿ ಬಾಪ್ತಿಸ್ಮ ಮಾಡಿಸುತ್ತೇನೆ. ಆದರೆ ನನ್ನ ಹಿಂದೆ ಬರುವವನು ನನಗಿಂತ ಶಕ್ತನು; ಆತನ ಕೆರಗಳನ್ನು ಹೊರಲಿಕ್ಕೂ ನಾನು ಯೋಗ್ಯನಲ್ಲ; ಆತನು ಪರಿಶುದ್ಧಾತ್ಮನಲ್ಲಿಯೂ ಬೆಂಕಿಯಲ್ಲಿಯೂ ನಿಮಗೆ ಬಾಪ್ತಿಸ್ಮ ಮಾಡಿಸುವನು" (ಮತ್ತಾಯ 3:11) ಎಂದು ಹೇಳಿದನು. ತನ್ನ ಪುನರುತ್ಥಾನದ ನಂತರದ ಸಂದೇಶಗಳಲ್ಲಿ, ಯೇಸುವು ಪುನಃ ತನ್ನ ಅಪೊಸ್ತಲರಿಗೆ ಪರಿಶುದ್ಧಾತ್ಮನ ಬಾಪ್ತಿಸ್ಮದ ವಾಗ್ದಾನ ಮಾಡಿದನು. ಆತನು ಅದನ್ನು "ತಂದೆಯ ವಾಗ್ದಾನ" ಎಂದು ಹೇಳಿದನು. "... ಯೋಹಾನನಂತೂ ನೀರಿನಲ್ಲಿ ಬಾಪ್ತಿಸ್ಮ ಮಾಡಿಸಿದನು. ನಿಮಗಾದರೋ ಇನ್ನು ಸ್ವಲ್ಪ ದಿವಸಗಳೊಳಗಾಗಿ ಪರಿಶುದ್ಧಾತ್ಮದಲ್ಲಿ ಬಾಪ್ತಿಸ್ಮವಾಗುವದು. ಆದಕಾರಣ ನೀವು ಯೆರೂಸಲೇಮನ್ನು ಬಿಟ್ಟು ಹೋಗದೆ ತಂದೆ ಮಾಡಿದಂಥ ನೀವು ನನ್ನಿಂದ ಕೇಳಿದಂಥ ವಾಗ್ದಾನಕ್ಕೆ ಕಾದುಕೊಂಡಿರ್ರಿ ಎಂದು ಅಪ್ಪಣೆಕೊಟ್ಟನು" ಎಂದು ಅಪೊಸ್ತಲರ ಕೃತ್ಯಗಳು 1:4, 5 ಹೇಳುತ್ತದೆ. ಇನ್ನೊಂದು ಸಂದರ್ಭದಲ್ಲಿ ಆತನು ಅವರಿಗೆ ಹೀಗೆ ಹೇಳಿದನು: "ಇಗೋ ನನ್ನ ತಂದೆಯು ವಾಗ್ದಾನ ಮಾಡಿದ್ದನ್ನು ನಿಮಗೆ ಕಳುಹಿಸಿಕೊಡುತ್ತೇನೆ. ದೇವರು ಮೇಲಣ ಲೋಕದಿಂದ ನಿಮಗೆ ಶಕ್ತಿಯನ್ನು ಹೊದಿಸುವ ತನಕ ಈ ಪಟ್ಟಣದಲ್ಲೇ ಕಾದುಕೊಂಡಿರ್ರಿ" (ಲೂಕ 24:49). ಪರಿಶುದ್ಧಾತ್ಮನ ಬಾಪ್ತಿಸ್ಮವನ್ನು ಸ್ವೀಕರಿಸುವವರು ಯಾರು ಎಂಬುದನ್ನು ಯೋಹಾನನಿಗಿಂತ ಹೆಚ್ಚು ಸ್ಪಷ್ಟವಾಗಿ ಯೇಸುವು ಹೇಳಿದನು, ಆತನು ತನ್ನ ಅಪೊಸ್ತಲರ ಹೆಸರನ್ನು ಹೇಳಿ, ಅವರು ಸ್ವೀಕರಿಸುವವರು ಎಂದು ಸ್ಪಷ್ಟಪಡಿಸಿದು.

*ನೆರವೇರುವಿಕೆಯ ಅರ್ಥ*

ಅಪೊಸ್ತಲರ ಕೃತ್ಯಗಳು 2ರ ಪ್ರಾರಂಭದಲ್ಲಿ, ಅಪೊಸ್ತಲರು ಪರಲೋಕದಿಂದ ತಮ್ಮ ಮೇಲೆ ಪರಿಶುದ್ಧಾತ್ಮನು ಸುರಿಸಲ್ಪಡುವುದರಿಂದ ಯೋವೇಲನ ವಾಗ್ದಾನ ನೆರವೇರುವಿಕೆಯನ್ನ ಅನುಭವಿಸಿದರು. "ಅದಲ್ಲದೆ ಉರಿಯುತ್ತಿದ್ದ ನಾಲಿಗೆಗಳು ವಿಂಗಡಿಸಿಕೊಳ್ಳುವ ಹಾಗೆ ಅವರಿಗೆ ಕಾಣಿಸಿ ಅವರಲ್ಲಿ ಒಬ್ಬೊಬ್ಬರ ಮೇಲೆ ಒಂದೊಂದಾಗಿ ಕೂತುಕೊಂಡವು. ಆಗ ಅವರೆಲ್ಲರು ಪರಿಶುದ್ಧಾತ್ಮ ಭರಿತರಾಗಿ ಆ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡವ ಪ್ರಕಾರ ಬೇರೆಬೇರೆ ಭಾಷೆಗಳಿಂದ ಮಾತಾಡುವದಕ್ಕೆ ಪ್ರಾರಂಭಿಸಿದರು" (ಅಪೊಸ್ತಲರ ಕೃತ್ಯಗಳು 2:3, 4) ಎಂದು ಲೂಕನು ಬರೆದನು. ಈ ಸುರಿಸುವಿಕೆಯು "ಬಿರುಗಾಳಿ ಬೀಸುತ್ತದೋ" ಎಂಬ ಶಬ್ದದೊಂದಿಗೆ ಕೂಡಿಕೊಂಡಿತ್ತು (ಅಪೊಸ್ತಲರ ಕೃತ್ಯಗಳು 2:2). ಪಂಚಾಶತ್ತಮ ದಿನವನ್ನು ಆಚರಿಸಲು ಯೆರೂಸಲೇಮಿನೊಳಗೆ ತುಂಬಿಕೊಂಡಿದ್ದ ಜನಸಮೂಹವು ಶಬ್ದವನ್ನು ಕೇಳಿ ಒಟ್ಟಾಗಿ ಕೂಡಿ ಬಂದರು ಮತ್ತು ಏನಾಗುತ್ತಿದೆ ಎಂದು ವಿಚಾರಸಿದರು. ಅವರು ಕೂಡಿ ಬಂದಾಗ, ಜನಸಮೂಹದ ಭಿನ್ನವಾದ ಭಾಷೆ ಹಾಗೂ ಉಪಭಾಷಣೆಗಳಲ್ಲಿ ಅಪೊಸ್ತಲರು ದೇವರ ಬಲವಾದ ಕಾರ್ಯಗಳ ಬಗ್ಗೆ ಮಾತಾಡುತ್ತಿರುವುದನ್ನು ಕೇಳಿದಾಗ ಆಶ್ಚರ್ಯದಿಂದ ಬೆರಗಾದರು.

ಜನರ ಗುಂಪು ತಾವು ನೋಡಿದ್ದರಿಂದಲೂ ಕೇಳಿದ್ದರಿಂದಲೂ ಬೆರಗಾಗಿ ಕಳವಳಗೊಂಡರು. ಗುಂಪಿನಲ್ಲಿದ್ದ ಕೆಲವರು, ಬಹುಶಃ ಭಯದಿಂದಲೂ ಅಜ್ಞಾನದಿಂದಲೂ, ಅಪೊಸ್ತಲರು ಮದ್ಯಪಾನ ಮಾಡಿ ಮತ್ತರಾಗಿದ್ದಾರೆಂದು ದೂರಿದರು. ಪೇತ್ರನು ಜನಸಮೂಹದ ಗಮನವನ್ನು ಸೆಳೆದುಕೊಂಡನು. ಬಹುಶಃ ಆಗಿನ

ದಿನದಲ್ಲಿ ವಿಶ್ವದ ಭಾಷೆಯಾದ ಗ್ರೀಕ್ ಭಾಷೆಯಲ್ಲಿ ಮಾತಾಡಿದನು ಮತ್ತು ಯೇಸುವು ಕ್ರಿಸ್ತನಾಗಿದ್ದಾನೆಂಬುದರ ಬಗ್ಗೆ ಪುರಾವೆಯನ್ನು ಒದಗಿಸಿದನು. ಪರಿಶುದ್ಧಾತ್ಮನಿಂದ ನಡಿಸಲ್ಪಟ್ಟವನಾಗಿ, ಪರಿಶುದ್ಧಾತ್ಮ ಸುರಿಸುವಿಕೆಯು ಯೇವೇಲನ ಪ್ರವಾದನೆಯ ನೆರವೇರಿಕೆಯಾಗಿದೆ ಎಂದು ವಿವರಿಸಿದನು. ಅವನ ಮಾತುಗಳು ಎಲ್ಲಾ ಸಮಯಕ್ಕಾಗಿ ಯೋವೇಲನ ಪ್ರವಾದನೆಯು ಮುಖ್ಯ ಅರ್ಥವನ್ನು ಸ್ಪಷ್ಟಪಡಿಸುತ್ತವೆ: "ಇದು ಪ್ರವಾದಿಯಾದ ಯೋವೇಲನ ಮೂಲಕವಾಗಿ ಹೇಳಿಸಿದ ಸಂಗತಿ" (ಅಪೊಸ್ತಲರ ಕೃತ್ಯಗಳು 2:16). ಹಿಂದಿನ ಸಂತತಿಯ ಒಬ್ಬ ಪ್ರಸಿದ್ಧ ಪ್ರಸಂಗಿಯಾದ ಫೊಯ್ ಎಲ್. ವ್ಯಾಲ್ಲೇಸನು, " 'ಇದು ಇದಾಗಿದೆ!' ಎಂದು ಪೇತ್ರನು ಹೇಳಿದನು" ಎಂದು ಹೇಳಿದ್ದಾನೆ. ಒಂದು ನೂತನ ಯುಗ, ಸಭೆಯ ಯುಗ, ಪ್ರಾರಂಭಿಸಲ್ಪಡುತ್ತಿತ್ತು. ಪ್ರೇರೇಪಿತ ಅಪೊಸ್ತಲನಾದ ಪೇತ್ರನು ನಮಗಾಗಿ ಯೋವೇಲನ ಪ್ರವಾದನೆಯ ಅರ್ಥವನ್ನು ವ್ಯಾಖ್ಯಾನಿಸಿದ್ದಾನೆ. ಅವನ ಸ್ಪಷ್ಟವಾದ ವಿವರಣೆಯು ಪ್ರವಾದನೆಯ ಬಗ್ಗೆ ಆತ್ಮನ ಸ್ವಂತ ವ್ಯಾಖ್ಯಾನವನ್ನು ನಮಗೆ ಕೊಡುತ್ತದೆ.

ಮಾನವ ಚರಿತ್ರೆಯು ಸೃಷ್ಟಿಯ ಅದ್ಭುತಗಳಿಂದ - ದೇವರ ಹಸ್ತದಿಂದ ಪುರುಷನ ಮತ್ತು ಸ್ತ್ರೀಯ ರಚನೆಯಿಂದ - ಪ್ರಾರಂಭವಾಯಿತು. ಅಪೊಸ್ತಲರ ಕೃತ್ಯಗಳು 2ರಲ್ಲಿ ದೇವರ ಆತ್ಮೀಕ ರಾಜ್ಯದ ಪ್ರಾರಂಭದಲ್ಲಿ, ಪರಿಶುದ್ಧಾತ್ಮನಿಂದ ಸಭೆಯು ರೂಪಿಸಲ್ಪಟ್ಟಂತೆ ಅದ್ಭುತವಾದದ್ದು ಪುನಃ ಕಂಡುಬರುತ್ತದೆ.

*ನೆರವೇರುವಿಕೆಯ ಸಂಪೂರ್ಣತೆ*

ಎಲ್ಲಾ ಯೇವೇಲನ ಪ್ರವಾದನೆಯು ಪಂಚಾಶತ್ತಮ ದಿನದಂದು ನೆರವೇರಲಿಲ್ಲ ಎಂಬುದು ಸತ್ಯವಾಗಿದೆ. ಯಾಕಂದರೆ ಗಂಡು ಮಕ್ಕಳು, ಹೆಣ್ಣು ಮಕ್ಕಳು, ಪ್ರಾಯಸ್ಥರು, ಯುವಕರು, ಸೇವಕರು ಮತ್ತು ಸೇವಕಿಯರು ಪರಿಶುದ್ಧಾತ್ಮನನ್ನು ಸ್ವೀಕರಿಸುವರು, ಮತ್ತು ಪ್ರವಾದಿಸುವರು, ದರ್ಶನಗಳನ್ನು ಹೊಂದುವರು, ಮತ್ತು ಕನಸುಗಳನ್ನು ಕಾಣುವರು ಎಂದು ಯೋವೇಲನು ಹೇಳಿದನು, ಆ ದಿನದಂದು ಇದಾವುದೂ ಪ್ರದರ್ಶಿಸಲ್ಪಟ್ಟದ್ದನ್ನು ನಾವು ನೋಡುವುದಿಲ್ಲ. ಇದಲ್ಲದೆ ಅಪೊಕಲಿಪ್ಟಿಕ್ ಭಾಷೆಯಲ್ಲಿ, ಬಹುಶಃ ಯೋವೇಲನು ತನ್ನ ಪ್ರವಾದನೆಯ ಅನಂತರದ ಭಾಗದಲ್ಲಿ ಬರಲಿಕ್ಕಿದ್ದ ನ್ಯಾಯತೀರ್ವಿಕೆಯ ದಿನಕ್ಕೆ ಸಂಬಂಧಿಸಿ ಹೇಳಿದನು. ಪಂಚಾಶತ್ತಮ ದಿನದಂದು ಯೋವೇಲನು ಮುಂತಿಳಿಸಿದ ಸಂಗತಿಗಳಲ್ಲಿ ಕೆಲವು ಮಾತ್ರವೇ ಸಂಭವಿಸಲ್ಪಟ್ಟಿವೆ. ಹಾಗಿದ್ದರೆ, "ಇದು ಪ್ರವಾದಿಯಾದ ಯೋವೇಲನ ಮೂಲಕವಾಗಿ ಹೇಳಿದ ಸಂಗತಿ" ಎಂಬ ಪೇತ್ರನ ಮಾತುಗಳ ಅರ್ಥವನ್ನು ನಾವು ಹೇಗೆ ಅರ್ಥಮಾಡಿಕೊಳ್ಳಬೇಕು?

ಆ ದಿನದಂದು ಯೋವೇಲನ ಪ್ರವಾದನೆಯ *ಹೃದಯವು*, "ಅಂತಿಮ ದಿನಗಳ," ಅದ್ಭುತಕರವಾದ ಪ್ರಾರಂಭವು ನೆರವೇರಲ್ಪಡುತ್ತಲಿದೆಯೆಂದು ಪೇತ್ರನು ಘೋಷಿಸಿದನು, ಈ ಅಲೌಕಿಕ ಘಟನೆಯಿಂದ ಅಪೊಸ್ತಲರು ಪರಿಶುದ್ಧಾತ್ಮನಿಂದ ಬಾಪ್ತಿಸ್ಮ ಹೊಂದಿದರು. ಈ ಬಾಪ್ತಿಸ್ಮವು ದೇವರ ಪ್ರಕಟನೆಯನ್ನು ಜನರಿಗೆ ಕೊಡಲು (ಅಪೊಸ್ತಲರ ಕೃತ್ಯಗಳು 2:22-36), ಇತರರಿಗೆ ಪರಿಶುದ್ಧಾತ್ಮನನ್ನು ಕೊಡಲು (ಅಪೊಸ್ತಲರ ಕೃತ್ಯಗಳು 8:14, 15), ಮತ್ತು ಅದ್ಭುತಕಾರ್ಯಗಳಿಂದ ಅವರು ಮಾತಾಡಿದ ಸಂದೇಶವನ್ನು ದೃಢಪಡಿಸಲು (ಇಬ್ರಿಯ 2:2-4) ಅವರನ್ನು ಶಕ್ತರನ್ನಾಗಿ ಮಾಡುತ್ತದೆ. ಆದುದರಿಂದ, ಪಂಚಾಶತ್ತಮ ದಿನದಂದು ಅಪೊಸ್ತಲರ ಮೇಲೆ ಪರಿಶುದ್ಧಾತ್ಮನ ಬರೋಣವು ಕ್ರೈಸ್ತ ಯುಗದ ಮೊದಲಿನ ಭಾಗದ *ಅದ್ಭುತಕರವಾದ ಪ್ರವಾಹವನ್ನು ಉತ್ಪಾದಿಸುವ ತಾಯಿ* ಬಗ್ಗೆಯಾಗಿದೆ. ಅನಂತರದ ದಿನಗಳಲ್ಲಿ, ಅಪೊಸ್ತಲರು ಇತರ ಕ್ರೈಸ್ತರ ಮೇಲೆ ತಮ್ಮ

ಕೃಗಳನ್ನಿಟ್ಟು, ಪರಿಶುದ್ಧಾತ್ಮನ ಅದ್ಭುತಕರವಾದ ವರಗಳನ್ನು ಅನುಗ್ರಹಿಸುವವರಾದರು. ಈ ಕೊಡುವಿಕೆಯು ಗಂಡುಮಕ್ಕಳು, ಹೆಣ್ಣುಮಕ್ಕಳು, ಪ್ರಾಯಸ್ಥರು, ಯುವಕರು, ಸೇವಕರು ಮತ್ತು ಸೇವಕಿಯರು ಪ್ರವಾದಿಸಲು ಶಕ್ತರನ್ನಾಗಿ ಮಾಡುವುದು.

ದೇವರು ತನ್ನ ಆತ್ಮವನ್ನು "ಎಲ್ಲಾ ಮನುಷ್ಯರ" ಮೇಲೆ ಸುರಿಸುವನೆಂದು ಯೋವೇಲನು ಹೇಳಿದನು (ಅಪೊಸ್ತಲರ ಕೃತ್ಯಗಳು 2:17; ಯೋವೇಲ 2:28). ಅವನ ಪ್ರವಾನೆಯ ಈ ಭಾಗವು ನಿಶ್ಚಯವಾಗಿ ಒಂದು ಪ್ರಾತಿನಿಧಿಕ ರೀತಿಯಲ್ಲಿ ನೆರವೇರಿತು. ಅಪೊಸ್ತಲರು ಪಂಚಾಶತ್ತಮ ದಿನದಂದು ಯೆಹೂದಿ ಜನಾಂಗಕ್ಕಾಗಿ ನಿಂತುಕೊಂಡರು (ಅಪೊಸ್ತಲರ ಕೃತ್ಯಗಳು 2), ಕೊರ್ನೇಲ್ಯನ ಮನೆಯಲ್ಲಿ ಪರಿಶುದ್ಧಾತ್ಮನ ಸುರಿಸುವಿಕೆಯನ್ನು ಅನ್ಯರು ಸಹ ದೇವರ ರಾಜ್ಯದಲ್ಲಿ ಸ್ವೀಕರಿಸಲ್ಪಡುವವರಾಗಿರುವರು ಎಂಬುದನ್ನು ಪ್ರಕಟಿಸಲು ದೇವರು ಉಪಯೋಗಿಸಿದನು (ಅಪೊಸ್ತಲರ ಕೃತ್ಯಗಳು 10). ಆದುದರಿಂದ, ಪಂಚಾಶತ್ತಮದಲ್ಲಿ ಅಪೊಸ್ತಲರೊಂದಿಗೆ ಮತ್ತು ಅನಂತರ ಕೊರ್ನೇಲ್ಯನ ಅನ್ಯಕುಟುಂಬ ಹಾಗೂ ಸ್ನೇಹಿತರೊಂದಿಗೆ, ದೇವರು "ಎಲ್ಲಾ ಮಾನವರ" ಪ್ರತಿನಿಧಿಗಳ ಮೇಲೆ ದೇವರು ತನ್ನ ಆತ್ಮವನ್ನು ಸುರಿಸಿದನು.

*ನೆರವೇರುವಿಕೆಯ ಸ್ಪಷ್ಟತೆ*

ಈ ಸುರಿಸುವಿಕೆಯ ಅರ್ಥದ ಬಗ್ಗೆ ಯಾರೂ ಗಲಿಬಿಲಿಮಾಡಿಕೊಳ್ಳಬೇಕಾಗಿಲ್ಲ. ಪ್ರೇರೇಪಿತ ಅಪೊಸ್ತಲನು ತಪ್ಪಿಲ್ಲದೇ ಅದು ಯೋವೇಲನ ಪ್ರವಾದನೆಯ ನೆರವೇರಿಕೆಯಾಗಿದೆ ಎಂದು ವಿವರಿಸಿದನು. ಘಟನೆಯ ಬಗ್ಗೆ ಪೇತ್ರನ ಪ್ರೇರೇಪಿತ ವ್ಯಾಖ್ಯಾನದೊಂದಿಗೆ, ಈ ಘಟನೆಯು "ಕೊನೆಯ ದಿನಗಳ" ಪ್ರಾರಂಭವಾಗಿತ್ತು ಎಂಬುದರ ಬಗ್ಗೆ ನಾವು ನಿಶ್ಚಿತತೆಯುಳ್ಳವರಾಗಿರಬೇಕು. ಪಂಚಾಶತ್ತಮ ದಿನದ ಪರಿಶುದ್ಧಾತ್ಮನ ಬಾಪ್ತಿಸ್ಮವು ಎಲ್ಲಾ ಪ್ರವಾದಿಗಳ ಮುನ್ನೋಡಿದ ಮತ್ತು ಅದರ ಬಗ್ಗೆ ಪ್ರವಾದಿಸಿದ ವಿಶೇಷ ಯುಗದ ಪ್ರಾರಂಭವಾಗಿದೆ.

ಅಪೊಸ್ತಲರ ಮೇಲೆ ಪರಿಶುದ್ಧಾತ್ಮನನ್ನು ಅದ್ಭುತಕರವಾಗಿ ಸುರಿಸುವುದರಿಂದ ದೇವರು ಹೊಸ ಒಡಂಬಡಿಕೆಯನ್ನು ಸ್ಥಳದಲ್ಲಿಡಲು ಆಯ್ದುಕೊಂಡನು ಮತ್ತು ಹೀಗೆ ಮಾನವ ಚರಿತ್ರೆಯ ಕೊನೆಯ ವಿಭಾಗ ಪ್ರಾರಂಭಿಸಿದನು. ಆತನ ಚಿತ್ತವು ಆತನ ಲಿಖಿತ ಪ್ರಕಟನೆಯಲ್ಲಿ ಒಮ್ಮೆ ಪೂರ್ಣವಾಗಿ ಪ್ರಕಟವಾದ ನಂತರ ಮತ್ತು ಸಭೆಯ ಯುಗವು ಪೂರ್ಣವಾಗಿ ಪ್ರಾರಂಭವಾದಾಗ, ಅದ್ಭುತಕಾರ್ಯಗಳು ನಿಂತು ಹೋದವು, ಯಾಕಂದರೆ ಅವುಗಳ ದೃಢಪಡಿಸುವಿಕೆಯು ಇನ್ನು ಮುಂದೆ ಅಗತ್ಯವಿರಲಿಲ್ಲ (1 ಕೊರಿಂಥ 13:8-10). ಅದ್ಭುತಕರವಾದ ಯುಗವು ಮುಕ್ತಾಯ ಗೊಂಡಿತು, ಆದರೆ ಸಭೆಯ ಯುಗವು "ಭೂಲೋಕದ ಚರಿತ್ರೆಯ" ಕೊನೆಯ ಯುಗದ ಸಮಯದ ಅಂತ್ಯದ ವರೆಗೆ ಮುಂದುವರಿಯುವುದು.

## ದೃಷ್ಟಾಂತ:

## ಪತ್ಯದ ಅರ್ಥವು ಏನಾಗಿರುವುದು?

ಒಬ್ಬ ಮನುಷ್ಯನು ದೇವರ ರಾಜ್ಯದ ಬರುವಿಕೆಯ ಬಗ್ಗೆ ಹಳೇ ಒಡಂಬಡಿಕೆಯ ಪ್ರವಾದನೆಗಳನ್ನು ಓದಿರುವನು. ಆದರೆ, ಆ ಪ್ರವಾದನೆಗಳ ಅರ್ಥದ ಬಗ್ಗೆ ಗಲಿಬಿಲಿಗೊಂಡಿರುವನೆಂದು ತಿಳಿಯಿರಿ. ಬರಲಿಕ್ಕಿದ್ದ ರಾಜ್ಯವು ನೋಡಲಿಕ್ಕೆ ಯಾವ ರೀತಿಯಲ್ಲಿ ಇರುವುದು ಎಂಬುದರ ಬಗ್ಗೆ ಅವನು ನಿಶ್ಚಿತತೆಯುಳ್ಳವನಾಗಿರುವುದಿಲ್ಲ.

ಪ್ರವಾದನೆಯ ಈ ವಿಷಯದ ಬಗ್ಗೆ ತಿಳುವಳಿಕೆಗಾಗಿ ಮತ್ತು ಸ್ಪಷ್ಟತೆಗೆ ಈ ಮನುಷ್ಯನು ಎಲ್ಲಿಗೆ ತಿರುಗುವನು?

ಮನುಷ್ಯನು ಅಪೊಸ್ತಲರ ಕೃತ್ಯಗಳು 2ಕ್ಕೆ ತಿರುಗುವನು. ಈ ತಿರುಗಣಿಯಂತಿರುವ ಅಧ್ಯಾಯವು ಈ ಎಲ್ಲಾ ಪ್ರವಾದನೆಗಳ ನೆರವೇರುವಿಕೆಯ ಪ್ರಾರಂಭವನ್ನು ಅವನಿಗೆ ತೋರಿಸುವುದು. ಬರಲಿಕ್ಕಿದ್ದ ರಾಜ್ಯವು ಹೇಗೆ ಕಾಣುತ್ತದೆಂಬುದರ ಬಗ್ಗೆ ಅವನಿಗೆ ಗಲಿಬಿಲಿಯಾಗಿದ್ದರೆ, ಅಪೊಸ್ತಲರ ಕೃತ್ಯಗಳು 2ಡು ಅದರ "ತಲುಪಿದ" ರೂಪದಲ್ಲಿ ದೇವರ ರಾಜ್ಯದ ಬರುವಿಕೆಯ ದೇವರ ಚಿತ್ತವನ್ನು ಅವನಿಗೆ ತೋರಿಸುವುದು. ಬರಲಿಕ್ಕಿದ್ದ ರಾಜ್ಯವು ಯಾವ ರೀತಿಯಲ್ಲಿತ್ತು ಎಂಬುದರ ಬಗ್ಗೆ ಅವನಿಗೆ ನಿಶ್ಚಿತತೆಯಿಲ್ಲದಿದ್ದರೆ, ಅಪೊಸ್ತಲರ ಕೃತ್ಯಗಳು 2ಡು ಅವನಿಗೆ ಜನರು ಸಭೆಯಂತೆ ಹೇಗೆ ಜೀವಿಸುವರು ಎಂಬುದನ್ನು, ಬರಲಿಕ್ಕಿದ್ದ ರಾಜ್ಯದ ಪ್ರವಾದನೆಗಳ ದೈವಿಕ ನೆರವೇರುವಿಕೆಯನ್ನು ತೋರಿಸುವುದು.

1975ರಲ್ಲಿ ಪ್ರಸಂಗಿಸುವ ಕೂಟಕ್ಕಾಗಿ ಸಿಂಗಾಪೂರಕ್ಕೆ ನಾನು ಆಮಂತ್ರಿಸಲ್ಪಟ್ಟೆನು. ಸಿಂಗಾಪೂರಿನ ಸುಂದರವಾದ ದೇಶದ ಬಗ್ಗೆ ನಾನು ಕೇಳಿದ್ದೆನು, ಆದರೆ ನಾನು ಅದನ್ನೆಂದೂ ಸಂದರ್ಶಿಸಿರಲಿಲ್ಲ. ಸಿಂಗಾಪೂರಿಗೆ ಬಹಳ ದಿನಗಳಿಂದ ಮಿಶನರಿಯಾಗಿದ್ದ ಗೋರ್ಡನ್ ಹೋಗನ್ ಅಲ್ಲಿಯ ಸಭೆಯೊಂದಿಗೆ ಸುವಾರ್ತಾ ಕೂಟಕ್ಕೆ ನಮ್ಮ ಸಿದ್ಧತೆಗಾಗಿ ಅದರ ಬಗ್ಗೆ ವಿವರಗಳನ್ನು ನಮಗೆ ಕಳುಹಿಸಿದರು. ಆರಾಧನೆಗಳ ಬಗ್ಗೆ, ಜನರ ಬಗ್ಗೆ ಮತ್ತು ಪರಿಸ್ಥಿತಿಗಳ ಬಗ್ಗೆ ಕಲ್ಪಿಸಿಕೊಳ್ಳಲು ನಾನು ಪ್ರಯತ್ನಿಸಿದೆನು. ದೇಶದ ಬಗ್ಗೆ ಮತ್ತು ನಾನು ಪ್ರಸಂಗಿಸಲಿಕ್ಕಿದ್ದ ಜನರ ಬಗ್ಗೆ ಮಾಹಿತಿ ಸಂಗ್ರಹಿಸಿದೆನು. ಸುವಾರ್ತಾ ಕೂಟಕ್ಕಿಂತ ಆರು ತಿಂಗಳ ಮೊದಲಿನ ಆರು ತಿಂಗಳ ಅವಧಿಯಲ್ಲಿ ನಾವು ಪತ್ರಗಳನ್ನು, ಉಪಯೋಗಿಸಲ್ಪಟ್ಟ ಪ್ರಚಾರದ ತುಂಡುಗಳನ್ನು ಮತ್ತು ಸ್ವಾಗತದ ಟಿಪ್ಪಣೆಗಳನ್ನು ಸ್ವೀಕರಿಸಿಕೊಂಡೆವು.

---

*ಪಂಚಾಶತ್ತಮ ದಿನದಂದಿನ*
*ಪರಿಶುದ್ಧಾತ್ಮನ ಬಾಪ್ತಿಸ್ಮವು*
*ವಿಶೇಷ ಯುಗದ ಪ್ರಾರಂಭವಾಗಿತ್ತು*
*ಅದರ ಕಡೆಗೆ ಎಲ್ಲಾ ಪ್ರವಾದಿಗಳು*
*ನೋಡಿದ್ದರು ಮತ್ತು ಅದರ ಬಗ್ಗೆ*
*ಅವರು ಪ್ರವಾದಿಸಿದ್ದರು.*

---

ಇವೆಲ್ಲವುಗಳನ್ನು ಒಂದು ಗೂಡಿಸಿ ಸುವಾರ್ತಾ ಕೂಟವು ಹೇಗಿರುತ್ತದೆಂಬುದನ್ನು ಚಿತ್ರಿಸಿಕೊಳ್ಳಲು ಪ್ರಯತ್ನಿಸಿದೆವು. ಅಂತಿಮವಾಗಿ, ಅಮೇರಿಕಾದಿಂದ ನಾವು ಹೊರಡುವ ಸಮಯವು ಬಂದಿತು, ಇಪ್ಪತ್ನಾಲ್ಕು ತಾಸುಗಳ ವಾಯುಮಾನದ ನಂತರ ನಾವು ಸಿಂಗಾಪೂರನ್ನು ತಲುಪಿದೆವು, ಮೊದಲನೆಯ ಆರಾಧನೆಯ ಸಮಯದಲ್ಲಿ, "ಇದು ಹೇಗಿರುವುದೆಂದು ನಾನು ಈಗ ನೋಡುತ್ತಿದ್ದೇನೆ, ಈಗ ನಿನಗೆ ಅರ್ಥವಾಗುತ್ತದೆ" ಎಂದು ಹೇಳಬಲ್ಲವನಾದೆನು.

ಒಬ್ಬನು ಹಳೇ ಒಡಂಬಡಿಕೆಯನ್ನು ಅಧ್ಯಯನ ಮಾಡುವಂತೆ, ಮತ್ತು ಬರಲಿಕ್ಕಿದ್ದ ರಾಜ್ಯದ ಬಗ್ಗೆ ಅನೇಕ ಪ್ರವಾದನೆಗಳನ್ನು ಕುರಿತು ಯೋಚಿಸುವಂತೆ, ರಾಜ್ಯವು ಬಂದಾಗ ಅದು ಹೇಗಿರುತ್ತದೆಂದು ಸಚೇತನಗೊಳಿಸಲು ಪ್ರಯತ್ನಿಸಬಹುದು. ಅವನು ಅಪೊಸ್ತಲರ ಕೃತ್ಯಗಳು 2ಕ್ಕೆ ತಿರುಗಿಕೊಂಡು, ಸಭೆಯ ರೂಪದಲ್ಲಿ ರಾಜ್ಯದ ಪ್ರಾರಂಭದ

ಗುರುತಿಸುವಿಕೆಯನ್ನು ಪೇತ್ರನು ಪ್ರೇರಣೆಯಂತೆ ನೋಡುವಾಗ, ಅವನು, "ದೇವರು ತನ್ನ ಪ್ರವಾದನೆಗಳಲ್ಲಿ ಏನು ಯೋಚಿಸಿದನೋ ಅದನ್ನು ನಾನೀಗ ನೋಡುತ್ತೇನೆ. ನನಗೆ ಈಗ ಅರ್ಥವಾಗುತ್ತದೆ" ಎಂದು ಹೇಳಬಲ್ಲನು. ದೇವರು ನಮಗೆ ಅಪೊಸ್ತಲರ ಕೃತ್ಯಗಳು 2ರಲ್ಲಿ ದೇವರ ರಾಜ್ಯದ ಚಿತ್ರವನ್ನು ಆದರ "ನಿಜವಾದ" ರೂಪದಲ್ಲಿ ಕೊಟ್ಟಿದ್ದಕ್ಕಾಗಿ ನಾವು ಆತನಿಗೆ ಕೃತಜ್ಞರಾಗಿರಬೇಕಲ್ಲವೇ!

ಹಳೇ ಒಡಂಬಡಿಕೆಯಲ್ಲಿಯ ಪ್ರವಾದಿಗಳಿಂದ ಮುಂತಿಳಿಸಲ್ಪಟ್ಟ ರಾಜ್ಯವು ಬಂದಿರುವದಿಲ್ಲ ಎಂದು ವಾದಿಸುವವಲಿಂದ ತಪ್ಪುದಾಲಿಗೆ ಎಳೆಯಲ್ಪಡಬೇಡಿರಿ. ಅಪೊಸ್ತಲರ ಕೃತ್ಯಗಳು 2ರ ಕಡೆಗೆ ತಿರುಗಿರಿ ಮತ್ತು ಈ ಪ್ರವಾದನಗಳ ಅದ್ಭುತಕರ ವಾದ ನೆರವೇರುವಿಕೆಯ ಬಗ್ಗೆ ಓದಿರಿ. ಅಪೊಸ್ತಲರ ಕೃತ್ಯಗಳು 2 ರಾಜ್ಯವು ಬಂದಿದೆ ಎಂಬುದನ್ನು ರುಜುವಾತುಪಡಿಸುವುದಲ್ಲದೇ, ಅದು ದೇವರು ತನ್ನ ರಾಜ್ಯವು ಹೇಗಿರ ಬೇಕೆಂದು ಉದ್ದೇಶಿಸಿದ್ದನು ಎಂಬುದನ್ನು ಸಹ ನಮಗೆ ಹೇಳುತ್ತದೆ.

## ಆಂತರಿಕರಣ: ಪತ್ಯವು ನಮ್ಮಿಂದ ಏನನ್ನು ಕೇಳುತ್ತದೆ?

ಈ ಪಠ್ಯಕ್ಕೆ ನಾವು ಹೇಗೆ ಪ್ರತಿಕ್ರಿಯೆ ತೋರಿಸೋಣ? ಅದನ್ನು ಜೀವನಕ್ಕೆ ಹೇಗೆ ಅನ್ವಯಿಸಲ್ಪಡಬೇಕು?

ಮೊದಲನೆಯದಾಗಿ, ಈ ಹಳೇ ಒಡಂಬಡಿಕೆಯ ಪ್ರವಾದನೆಯ ನೆರವೇರುವಿಕೆಯು ನಮ್ಮೊಳಗೆ *ಕದಲಿಸಲಾಗದ ಮನವರಿಕೆಯನ್ನು* ತುಂಬಿಸುವಂತೆ ಬಿಡತಕ್ಕದ್ದು. ಸಭೆಯ ಪ್ರಾರಂಭವನ್ನು ಕುರಿತು ನಮ್ಮ ನಂಬಿಕೆಯು ಸ್ಥಿರವಾದದ್ದೂ ಅಲುಗಾಡದದ್ದೂ ಆಗಿರಬೇಕು. ತನ್ನ ಆತ್ಮನ ಅದ್ಭುತಕರವಾದ ಸುರಿಸುವಿಕೆಯೊಂದಿಗೆ ದೇವರು ಅದರ ಪ್ರಾರಂಭವನ್ನು ಘೋಷಿಸಿದ್ದಾನೆ. ತನ್ನ ಸಭೆಯ ಪ್ರಾರಂಭವನ್ನು ಪ್ರಕಟಿಸುವದಕ್ಕೆ ದೇವರು ಬೇರೆ ಯಾವ ಉತ್ತಮವಾದ ಮಾರ್ಗವನ್ನು ಆಯ್ದುಕೊಳ್ಳ ಬಹುದಿತ್ತು? ತನ್ನ ರಾಜ್ಯದ ಬರೋಣವನ್ನು ದೇವರು ಇನ್ನೂ ಹೆಚ್ಚು ಖಂಡಿತವಾಗಿ ಹೇಗೆ ಪ್ರಕಟಿಸ ಬಹುದಿತ್ತು?

ಎರಡನೆಯದಾಗಿ, ಪಂಚಾಶತ್ತಮದಂದು ಯೋವೇಲನ ಪ್ರವಾದನೆಯ ನೆರವೇ ರುವಿಕೆಯು ನಮ್ಮೊಳಗೆ ನಾಗರಿಕತ್ವದ *ಅಲುಗಾಡದ ಭಾವನೆಯನ್ನು ಹುಟ್ಟಿಸತಕ್ಕದ್ದು.* ದೇವರ ರಾಜ್ಯವು ಬಂದಿರುವುದು ಮತ್ತು ನಾವು ಅದರಲ್ಲಿ ಇರಬಹುದು ಎಂಬ ನಿಶ್ಚಿತ ವಾದ ಜ್ಞಾನದಲ್ಲಿ ಜೀವಿಸಬಹುದು. ಆತನ ಆತ್ಮನ ಸುರಿಸುವಿಕೆಯ ಘಟನೆಯಲ್ಲಿ ಹುದುಗಿಕೊಂಡಿದ್ದ ದೇವರ ಸಾಕ್ಷಿಯನ್ನು ನಾವು ಸ್ವೀಕರಿಸಿದರೆ, ನಾವು ದೇವರ ರಾಜ್ಯದ ಪ್ರಜೆಗಳಾಗುವೆವು ಮತ್ತು ಅದರ ನಾಗರಿಕರಾಗಿ ಜೀವಿಸುವೆವು ಎಂಬ ಆನಂದಕರವಾದ ತಿಳುವಳಿಕೆಯಲ್ಲಿ ನಾವು ಜೀವಿಸಬಹುದು. ಈ ಪ್ರವಾದನೆ ಮತ್ತು ಆದರ ನೆರವೇರುವಿಕೆಯು ರಾಜ್ಯದ ಗುರುತಿಸುವಿಕೆ, ಮಹತ್ವ ಮತ್ತು ತೋರಿಕೆಯ ಬಗ್ಗೆ ನಿಶ್ಚಿತತೆಯನ್ನು ನಮಗೆ ಕೊಡುವುದು.

ಮೂರನೆಯದಾಗಿ, *ದಣಿಯದ ಸಮರ್ಪಣೆಯೊಂದಿಗೆ* ಉತ್ತರಕೊಡೋಣ. ದೇವರ ರಾಜ್ಯದಲ್ಲಿ ಜೀವಿಸುವುದಕ್ಕೆ ಮತ್ತು ದೇವರ ರಾಜ್ಯದ ಸಂದೇಶವನ್ನು ಪ್ರಸಂಗಿಸುವುದಕ್ಕೆ ನಾವು ಪ್ರತಿಷ್ಠಿಸಿಕೊಳ್ಳತಕ್ಕದ್ದು. ಯೇಸುವಿನ ಮುಖಾಂತರ, ನಾವು ಆತನ ರಾಜ್ಯದೊಳಗೆ ಸೇರಿಸಲ್ಪಟ್ಟಿದ್ದೇವೆ (ಕೊಲೊಸ್ಸೆ 1:13). ಯಾರೋ ಒಬ್ಬರು ಹೇಳಿದಂತೆ, "ಪರಲೋ ಕಕ್ಕೆ ಹೋಗಲು ಪ್ರಯತ್ನಿಸುವ ಈ ಲೋಕದ ನಾಗರಿಕರು ನಾವಾಗಿರುವುದಿಲ್ಲ; ನಾವು ಪರಲೋಕದ ನಾಗರಿಕರಾಗಿದ್ದು ಈ ಲೋಕದ ಮುಖಾಂತರ ದಾಟಿಹೋಗಲು ಪ್ರಯತ್ನಿಸುವವರಾಗಿದ್ದೇವೆ." ನಾವು ಪಾರಲೌಕಿಕ ರಾಜ್ಯಕ್ಕೆ ಒಳಪಟ್ಟವರಾಗಿರುತ್ತೇವೆ,

ಮತ್ತು ಇತರ ಜನರಿಗೆ ರಾಜ್ಯವನ್ನು ವಿಸ್ತರಿಸುವ ಕೆಲಸದಲ್ಲಿ ನಾವಿರಬೇಕು.

## ಮುಕ್ತಾಯ

ಪರಿಶುದ್ಧಾತ್ಮನ ಅದ್ಭುತಕರವಾದ ಸುರಿಸುವಿಕೆಯು ಎಲ್ಲಾ ಜನರಿಗೆ ಸಭೆಯ ಅರ್ಥವನ್ನು ದೃಢಪಡಿಸುತ್ತದೆ. ಪರಿಶುದ್ಧ ಬರಹಗಳ ಬೋಧನೆಗೆ ನಂಬಿಗಸ್ತಿಕೆಯು ಯೋವೇಲನ ಪ್ರವಾದನೆಯ ಹೃದಯದ ನೆರವೇರುವಿಕೆಯಂತೆ ಅಪೊಸ್ತಲರ ಕೃತ್ಯಗಳು 2ನ್ನು ನಾವು ನೋಡುವ ಅಗತ್ಯತೆಯನ್ನು ಒಳಗೊಂಡಿರುತ್ತದೆ. "ಕೊನೆಯ ದಿನಗಳ," ಹಳೇ ಒಡಂಬಡಿಕೆಯ ಪ್ರವಾದನೆಗಳ ರಾಜ್ಯದ - ಒತ್ತಡದ ಕಾರಣದಿಂದ ಬಹಳ ದಿನಗಳಿಂದ ನಿರೀಕ್ಷಿಸುತ್ತಿದ್ದ ರಾಜ್ಯದ ಬರುವಿಕೆಯೊಂದಿಗೆ ಪಂಚಾಶತ್ತಮ ದಿನದಂದು ಪ್ರಾರಂಭವಾಯಿತು.

ಇಂದು ನಾವು ರಾಜ್ಯವನ್ನು, ಸಭೆಯನ್ನು, ಐತಿಹಾಸಿಕ ಪಂಚಾಶತ್ತಮ ದಿನದಂದು ಅಂದು ಪ್ರವೇಶಿಸಿದಂತೆಯೇ, ಪ್ರವೇಶಿಸುತ್ತೇವೆ. ನಂಬಿಕೆಯಿಂದ, ಪೇತ್ರನು ಪ್ರಸಂಗಿಸಿದ್ದನ್ನು ಕೇಳಿಸಿಕೊಂಡ ಜನರು, "ನಾವು ಏನು ಮಾಡಬೇಕು?" ಎಂದು ಕೇಳಿದರು (ಅಪೊಸ್ತಲರ ಕೃತ್ಯಗಳು 2:37). ಪರಿಶುದ್ಧಾತ್ಮನಿಂದ ನಡಿಸಲ್ಪಟ್ಟು ಅವನು, "ನಿಮ್ಮ ಪಾಪಗಳು ಪರಿಹಾರವಾಗುವುದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸುಕ್ರಿಸ್ತನ ಹೆಸರಿನ ಮೇಲೆ ಬಾಪ್ತಿಸ್ಮ ಮಾಡಿಸಿಕೊಳ್ಳಿರಿ; ಆಗ ನೀವು ಪರಿಶುದ್ಧಾತ್ಮ ದಾನವನ್ನು ಹೊಂದುವಿರಿ" ಎಂದು ಉತ್ತರಕೊಟ್ಟನು (ಅಪೊಸ್ತಲರ ಕೃತ್ಯಗಳು 2:38). ಮೂರು ಸಾವಿರ ಜನರು ಅವನ ವಾಕ್ಯಗಳನ್ನು ಸ್ವೀಕರಿಸಿದರು ಮತ್ತು ಬಾಪ್ತಿಸ್ಮ ಮಾಡಿಸಿಕೊಂಡರು. ದೇವರ ರಾಜ್ಯವನ್ನು ಪ್ರವೇಶಿಸಿದವರಾಗಿ, ಅವರು, "ಅಪೊಸ್ತಲರ ಬೋಧನೆಯನ್ನು ಕೇಳುವದರಲ್ಲಿಯೂ ಸಹೋದರರ ಅನ್ಯೋನ್ಯತೆಯಲ್ಲಿಯೂ ರೊಟ್ಟಿಮುರಿಯುವದರಲ್ಲಿಯೂ ನಿರತರಾಗಿದ್ದರು" (ಅಪೊಸ್ತಲರ ಕೃತ್ಯಗಳು 2:42).

ಹಾರ್ಡಿಂಗ್ ಯುನಿವರ್ಸಿಟಿಯಲ್ಲಿಯ ನನ್ನ ವಿದ್ಯಾರ್ಥಿಗಳಿಗೆ, ಇತರ ಯುವಜನರು ಅವರೊಂದಿಗೆ ಸಂತೋಷದಿಂದ ಸ್ಥಳಗಳ ವ್ಯಾಪಾರ ಮಾಡುವರೆಂದು ಆಗಾಗ ಹೇಳುತ್ತೇನೆ. ಪ್ರತೀ ವರ್ಷ ಕೆಲವು ಯೋಗ್ಯ ವಿದ್ಯಾರ್ಥಿಗಳು ಹಾರ್ಡಿಂಗಿಗೆ ಬರಲಿಕ್ಕಾಗುವುದಿಲ್ಲ; ಯಾಕಂದರೆ ಅವರಿಗೆ ಅಗತ್ಯವಾದ ಹಣಕಾಸಿನ ಸಾಧ್ಯತೆಯಿರುವುದಿಲ್ಲ. ಯಾರಾದರೂ ಹಣ ಒದಗಿಸಿಕೊಟ್ಟರೆ, ಹಾಗೂ ಅವರಿಗೆ ಬರಲಿಕ್ಕೆ ಸಾಧ್ಯವಾದರೆ, ಅವರು ಈ ಅವಕಾಶದ ಲಾಭವನ್ನು ಹೇಗೆ ತೆಗೆದು ಕೊಳ್ಳುತ್ತಾರಲ್ಲವೇ! ಹಳೇ ಒಡಂಬಡಿಕೆಯ ಯೋಗ್ಯ ವ್ಯಕ್ತಿಗಳು ಅವರು ನೋಡಲಿಕ್ಕೆ ಹಂಬಲಿಸುತ್ತಿದ್ದ ರಾಜ್ಯದ ಬರುವಿಕೆಯ ಬಗ್ಗೆ ಸಾಕಷ್ಟನ್ನು ತಿಳಿದಿದ್ದರು. ಅದರ ಭಾಗವಾಗಿರಲು ಅವರು ಬಯಸಿದರು, ಆದರೆ ಅವರಿಗೆ ಆ ಅವಕಾಶವು ಕೊಡಲ್ಪಡಲಿಲ್ಲ. ಅದು ನಮಗೆ ಕೊಡಲ್ಪಟ್ಟಿದೆ. "ಕೊನೆಯ ದಿನಗಳ" ಯುಗದಲ್ಲಿ ನಾವು ಜೀವಿಸುತ್ತಿದ್ದೇವೆ. ಇದು ಉನ್ನತವಾದ ಅಸಾಮಾನ್ಯ ಮೆಚ್ಚಿಕೆಯುಳ್ಳ ಸಮಯವಾಗಿದೆ, ರಾಜ್ಯವು ಪ್ರಸ್ತುದಲ್ಲಿರುವ ಸಮಯವಾಗಿದೆ. ನಾವು ನೋಡುತ್ತಿರುವುದನ್ನು ನೋಡಲು ಬಯಸಿದ ಹಾಗೂ ನಾವಿರುವಂಥ ಅವಕಾಶವುಳ್ಳವರಾಗಿರುವಂತೆ ಆಗಲು ಬಯಸಿದ, ಹಳೇ ಒಡಂಬಡಿಕೆಯಲ್ಲಿದ್ದವರ ಬಗ್ಗೆ ಯೋಚಿಸಿರಿ.

ನೀನು ದೇವರ ರಾಜ್ಯದ ಹೊರಗೆ ಇರುವವನಾಗಿದ್ದರೆ, ಆತನ ರಾಜ್ಯದೊಳಗೆ ಪ್ರವೇಶಿಸಲಿಕ್ಕೆ ಮತ್ತು ನಿನ್ನ ಮೇಲೆ ಸುರಿಸಲ್ಪಟ್ಟ ಕೃಪೆಗಾಗಿ ಕೃತಜ್ಞತೆಯೊಂದಿಗೆ, ನಡುಗುವ ಹೃದಯದಿಂದ ಸ್ವೀಕರಸಲಿಕ್ಕೆ ವೇಗವಾಗಿ ಮುನ್ನಡೆ. ನೀನು ಆತನ ರಾಜ್ಯವನ್ನು ಪ್ರವೇಶಿಸಿದ್ದರೆ, "ನೋಡಿರಿ, ಲೋಕವು ಯಾವುದಕ್ಕೆ ಬಂದಿದೆ" ಎಂದು ನಿರುತ್ಸಾಹಗೊಳಿಸುತ್ತ

ನಿಂತುಕೊಳ್ಳಬೇಡ, ಆದರೆ "ಲೋಕಕ್ಕೆ ಏನು ಬಂದಿದೆ ನೋಡಿರಿ!" ಎಂದು ಆನಂದ ಭರಿತರಾಗಿ ಹೇಳಿರಿ.

---

## ಅಧ್ಯಯನಕ್ಕಾಗಿ ಮತ್ತು ಚರ್ಚೆಗಾಗಿ ಪ್ರಶ್ನೆಗಳು

1. ಈ ಅಧ್ಯಾಯದ ಪ್ರಾರಂಭದಲ್ಲಿ ಚರ್ಚಿಸಿದ ಪ್ರವಾದನೆಯ ಮೂರು ವಿಧಗಳನ್ನು ಗುರುತಿಸಿರಿ. ಪ್ರತಿಯೊಂದರ ಉದಾಹರಣೆಗಳನ್ನು ಕೊಡಿರಿ.
2. "ಅಂತಿಮ ದಿನಗಳು" ಎಂಬುದನ್ನು ನಿರೂಪಿಸಿರಿ.
3. ಯೋವೇಲನ ಪ್ರವಾದನೆಯು ಹೇಗೆ ಇಮ್ಮಡಿ ಪ್ರವಾದನೆಯಾಗಿರ ಬಹುದೆಂಬುದನ್ನು ಚರ್ಚಿಸಿರಿ.
4. ಪರಿಶುದ್ಧಾತ್ಮನು ಅಪೊಸ್ತಲರಿಗೆ ವಾಗ್ದಾನ ಮಾಡಲ್ಪಟ್ಟಿತ್ತು ಎಂದು ಸೂಚಿಸುವ ಪರಿಶುದ್ಧ ಬರಹಗಳ ಯಾದಿ ಮಾಡಿರಿ.
5. ಪಂಚಾಶತ್ತಮ ದಿನದಂದು ಪರಿಶುದ್ಧಾತ್ಮನ ಸುರಿಸುವಿಕೆಯನ್ನು ವಿವರಿಸಿರಿ.
6. ಪಂಚಾಶತ್ತಮ ದಿನದಂದು ಯೋವೇಲನ ಎಲ್ಲಾ ಪ್ರವಾದನೆಗಳು ನೆರವೇರಿದವೋ?
7. "ಇದು ಪ್ರವಾದಿಯಾದ ಯೋವೇಲನ ಮೂಲಕವಾಗಿ ಹೇಳಿಸಿದ ಸಂಗತಿ" ಎಂದು ಪೇತ್ರನು ಹೇಳಿದಾಗ ಅವನ ಅರ್ಥ ಏನಾಗಿತ್ತು?
8. ಯೋವೇಲನ ಪ್ರವಾದನೆಯಲ್ಲಿ "ಎಲ್ಲಾ ಮನುಷ್ಯರ ಮೇಲೆ" ಎಂಬ ಮಾತುಗಳನ್ನು ನೀವು ಹೇಗೆ ಅರ್ಥಮಾಡಿಕೊಳ್ಳುವಿರಿ?
9. ಅದ್ಭುತಕಾರ್ಯಗಳ ಯುಗವು ಯಾವಾಗ ಮುಗಿದು ಹೋಯಿತು?
10. ಅಪೊಸ್ತಲರ ಕೃತ್ಯಗಳು 2ನೆಯ ಅಧ್ಯಾಯವು ತಿರುಗಣಿಯಂಥ ಅಧ್ಯಾಯ ಎಂದು ಯಾಕೆ ಕರೆಯಲ್ಪಟ್ಟಿದೆ?
11. ಯೋವೇಲನ ಪ್ರವಾದನೆಯ ನೆರವೇರುವಿಕೆಗೆ ನಾವು ಹೇಗೆ ಪ್ರತಿಕ್ರಿಯೆ ತೋರಿ ಸ ಬೇಕು?
12. ದೇವರ ರಾಜ್ಯವನ್ನು ನಾವು ಹೇಗೆ ಪ್ರವೇಶಿಸುತ್ತೇವೆ?
13. ದೇವರ ಸಭೆಯನ್ನು ನಾವು ಹೇಗೆ ಪ್ರವೇಶಿಸುತ್ತೇವೆ?

© 2009 Truth for Today